(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತದ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಈ ದಿನದ ಲಿಖಿತ ಮೂಲಕ ಉತ್ತರಿಸುವ 2ನೇ ಪ್ರಶ್ನೆಗಳ ಪಟ್ಟಿಯಲ್ಲಿನ 45 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ಹಾವೇರಿ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

50 (112)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಯಾವ ಯಾವ ದವಾಖಾನೆಗಳಲ್ಲಿ ಹುದ್ದೆಗಳು ಖಾಲಿ ಇವೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹಾವೇರಿ ಜಿಲ್ಲೆಯಲ್ಲಿ 19 ದವಾಖಾನೆಗಳಲ್ಲಿ 35 ವೈದ್ಯರ ಹುದ್ದೆ ಖಾಲಿ ಇರುತ್ತವೆ. ತಾಲ್ಲೂಕುವಾರು ವಿವರ ಲಗತ್ತಿಸಿದೆ.

ಆ) ತಾಲ್ಲೂಕು ಆಸ್ಪತ್ರೆಗಳಿಗೆ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬಂದ ವೈದ್ಯರನ್ನು ನೇಮಿಸುವ ಮೂಲಕ ಮತ್ತು ಗ್ರಾಮೀಣ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಹಾವೇರಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ತಾಲ್ಲೂಕುವಾರು ವಿವರ.

1)	ಪ್ರಾ.ಆ.ಕೇಂದ್ರ, ನೆಗಳೂರು -	ಹಾವೇರಿ ತಾ:	- 1
2)	ಪ್ರಾ.ಆ.ಘಟಕ, ಹೊಸರಿತ್ತಿ	-''-	- 1
3)	ಪ್ರಾ.ಆ.ಕೇಂದ್ರ, ಗುತ್ತಲ	-''-	- 3
4)	ಸಾ.ಆಸ್ಪತ್ರೆ, ರಾಣೆಬೆನ್ನೂರ,	ರಾಣೆಬೆನ್ನೂರು ತಾ:	- 2
5)	ಪ್ರಾ.ಆ.ಕೇಂದ್ರ, ಹಲಗೇರಿ	-''-	- 1